ಪ್ರಶಾಂತ ಸ್ನೂಪಿಯ ಜೊತೆ ನಿಂತಿದ್ದ.

'ಏನಾಯ್ತು ಪ್ರಶಾಂತ?'

ಸ್ನೂಪಿ ಸಿಟ್, ಸ್ಟಾಂಡ್, ಟರ್ನ್‌ಗಳನ್ನ ಪ್ರಶಾಂತನ ಮುಂದೆ ಮಾಡಿ ಮಾಡಿ ತೋರಿಸಲು ಶುರುಮಾಡಿತು. ಪ್ರಿಯಾ ಕಂಡ ಕೂಡಲೇ ಇನ್ನಷ್ಟು ಅಗ್ರೆಸಿವ್ ಆಗಿ ಮತ್ತೆ ಸಿಟ್ ಸ್ಟಾಂಡ್ ಜಂಪ್ ಮಾಡಲಾರಂಭಿಸಿತು.

'ಒಳಗೆ ಬಾ'

ಪ್ರಶಾಂತ ಸುಸ್ತಾಗಿ ಸೋಫಾದ ಮೇಲೆ ಕುಸಿದ.

ಸ್ನೂಪಿ, ಸುಮ್ನಿರು ಎಂದು ರೇಗಿದವಳು ಅದರ ಊಟದ ಬಟ್ಟಲು ತಂದಳು. ಊಟ ಮಾಡದೇ ಅವಳನ್ನು ನೋಡುತ್ತಿದ್ದ ಮರಿಯ ಕಣ್ಣು ತುಂಬೆಲ್ಲಾ ನೀರು.

'ಗೊತ್ತಿಲ್ಲ ಪ್ರಿಯಾ, ಊಟ ನಿದ್ದೆ ಮಾಡದೇ ಇದೇ ಮಾಡ್ತಿದೆ ಸಂಜೆಯಿಂದನೂ'

ಅವನ ಮಾತು ಕೇಳುತ್ತಿದ್ದಂತೆ ಮರಿ ಮತ್ತೊಮ್ಮೆ ಸಿಟ್, ಸ್ಟಾಂಡ್ ಮಾಡಲಾರಂಭಿಸಿತು.

ಪ್ರಿಯಾಗೆ ಅಷ್ಟೂ ಹೊತ್ತೂ ತಲೆಗೆ ಹೋಗದೇ ಇದ್ದಿದ್ದು ಆಗ ತಲೆಗೆ ಹೊಡೆದ ಹಾಗಾಯಿತು. 'ಪ್ರಶಾಂತ, ಇದನ್ನ ಯಾರಿಗೂ ಕೊಡಬೇಡ, ಅವರಿಗೆ ಬರಬೇಡಿ ಅಂತ ಹೇಳು' ಎಂದು ಕೂಗಲಾರಂಭಿಸಿದಳು.

'ಯಾಕೆ...'

'ಅದನ್ನೊಮ್ಮೆ ನೋಡು'

'ಅದಕ್ಕೇನಾಯ್ತು? ಯಾಕೆ ಹೀಗಾಡ್ತಿದೆ?'

'ನೀನು ಹೇಳಿಕೊಟ್ಟಿದ್ದೆಲ್ಲಾ ಮಾಡ್ತಿದೀನಲ್ಲ ನಾನು, ಮತ್ಯಾಕೆ ಕಳಿಸ್ತಿದೀಯಾ ಅಂತ ಕೇಳ್ತಾ ಇದೆ ಅದು. ಅದನ್ನ ಕಳಿಸೋಕಾಗಲ್ಲ ನನ್ನಿಂದ, ಪ್ಲೀಸ್ ಅವರಿಗೆ ಬರೋದು ಬೇಡ ಅಂತ ಹೇಳು'

ಈಗ ಪ್ರಶಾಂತನಿಗೂ ಸಂಕಟ ಶುರುವಾಗಿತ್ತು. 'ನೋಡ್ಕೊಳೋಕೆ ಆಗತ್ತಾ? ಕಷ್ಟ ಅಲ್ವಾ...?'

'ನಂಗೆ ಗೊತ್ತಿಲ್ಲ... ಆದರೆ ಈಗಂತೂ ಕಳಿಸೋಕಾಗ್ತಿಲ್ಲ. ಪ್ಲೀಸ್ ಅವರಿಗೆ ಬರಬೇಡ ಅನ್ನು' ಪ್ರಿಯಾ, ಸ್ನೂಪಿ ಇಬ್ಬರೂ ಕಣ್ಣು ತುಂಬಿಕೊಂಡಿದ್ದರು.

'ಒಂದು ಹತ್ತು ನಿಮಿಷ ಬಂದೆ' ಪ್ರಶಾಂತ ಮೆಟ್ಟಿಲಿಳಿದು ಹೋದ

ಅವನು ಸಿಗರೇಟು ಸೇದಿ ಬರುವ ಹೊತ್ತಿಗೆ ಸ್ನೂಪಿ ಊಟ ಮಾಡಿ ಪ್ರಿಯಾಳ ಕಾಲ ಬಳಿ ಸುತ್ತಿ ಸುತ್ತಿ ಅವಳ ತೊಡೆ ಮೇಲೆ ಮುಖ ಇಟ್ಟು ಮಲಗಿತ್ತು.

* * *

'ಪ್ರಿಯಾ... ಸ್ವಲ್ಪ ಮಾತಾಡೋದಿದೆ ನಿನ್ ಹತ್ರ...'

'ಹೇಳು'

'ಅದು.... ಐ ಥಿಂಕ್ ವಿ ಶುಡ್ ಗಿವ್ ಇಟ್ ಎ ಟ್ರೈ'

'ಏನ್ ಹೇಳ್ತಿದೀ?'

'ಸ್ನೂಪಿ ಮಗುವಿಗಿಂತ ಹೆಚ್ಚಾಗಿ ಬೆರೆತುಹೋಗಿದೆ ನಮ್ಮಲ್ಲಿ. ನಾವಿಬ್ಬರೂ ಒಟ್ಟಿಗೆ ಇರೋ ಪ್ರಯತ್ನ ಮಾಡಿದ್ದಕ್ಕಿಂತ ಬೇರೆಯಾಗೋ ಹಟ ಸಾಧಿಸಿದ್ದೇ ಹೆಚ್ಚು. ಆದರೆ, ನಾವಿಬ್ರೂ ಸಪರೇಟ್ ಆಗೋದರಿಂದ ಆ ಕೂಸು ಒದ್ದಾಡೋದು ನೋಡೋಕಾಗಲ್ಲ. ನಮ್ಮಿಬ್ಬರಿಗೋಸ್ಕರ ಅಲ್ಲದಿದ್ರೂ, ಸ್ನೂಪಿಗೋಸ್ಕರ ಆದ್ರೂ, ಒಮ್ಮೆ ಕೌನ್ಸೆಲಿಂಗ್ ತಗೊಂಡು ಈ ಮದ್ವೆನ ಉಳಿಸ್ಕೊಳೋ ಪ್ರಯತ್ನ ಮಾಡೋಣ. ಅಕಸ್ಮಾತ್ ಆಗಲೂ ಆಗದೇ ಇದ್ರೆ ಆಗ ಏನ್ ಮಾಡಬಹುದು ಅಂತ ಯೋಚಿಸೋಣ, ಬಟ್ ಪ್ಲೀಸ್... ಒಂದು ಪ್ರಯತ್ನ?'

ಪ್ರಿಯಾಳ ಕಣ್ಣು ತುಂಬಿಕೊಂಡಿತ್ತು. ಮರು ಮಾತಿಲ್ಲದೇ ತಲೆಯಾಡಿಸಿದ್ದಳು.

* * *

'ಐಸ್ಕ್ರೀಂ ಆರ್ಡರ್ ಮಾಡ್ಲಾ?'

'ಏನ್ ಇಷ್ಟೊತ್ತಲ್ಲಾ?'

'ಹ್ಞೂ, ಸ್ನೂಪಿನೂ ತಿನ್ನತ್ತಲ್ಲ?'

'ಸರಿ ಹಾಗಾದ್ರೆ, ಮಾಡ್ತೀನಿ ನಾನೇ...'

ಕತ್ತಲ ನೀರವತೆಯಲ್ಲಿ ಐಸ್ಕ್ರೀಮಿಗಾಗಿ ಕಾಯುತ್ತಾ ಕುಳಿತ ಮೂವರ ಹೃದಯವೂ ಕರಗಿ ಕಣ್ಣಲ್ಲಿ ಹರಿಯುತ್ತಿತ್ತು.

●

